## ಕರ್ನಾಟಕ ಸರ್ಕಾರದ ನಡವಳಿಗಳು.

**ವಿಷಯ:** ಶ್ರೀ ಶಿವರಾಮ್.ಕೆ.ಚವ್ಹಾಣ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತಿ ಬಾಲ್ಕಿ ಇವರ ಅಮಾನತ್ತಿನ ಅವಧಿಯನ್ನು ಕರ್ತವ್ಯದ ಅವಧಿಯೆಂದು ಪರಿಗಣಿಸುವ ಬಗ್ಗೆ.

**ಓದಲಾಗಿದೆ:**
1. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ:153:ವಿಸೇಬಿ:2011. ದಿ:11-11-2011.
2. ಕೆ.ಎ.ಟಿ. ಅರ್ಜಿ ಸಂಖ್ಯೆ:7451/2011. ದಿನಾಂಕ:18-11-2011 ಮತ್ತು 26-03-2013.
3. ಸರ್ಕಾರದ ಅಧಿಸೂಚನೆ ಸಂಖ್ಯೆ:ಗ್ರಾಅಪ:162:ಪಬವ 2011.ದಿ:09-12-2011
4. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ:153:ವಿಸೇಬಿ:2011. ದಿ:25-04-2014.
5. ಶ್ರೀ ಶಿವರಾಮ್.ಕೆ.ಚವ್ಹಾಣ ಇವರ ಲಿಖಿತ ಹೇಳಿಕೆ ದಿನಾಂಕ:19-05-2014
6. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್ ಬೀದರ್, ಇವರಪತ್ರಸಂಖ್ಯೆ:ಜಿಪಂಬಿ/ಸಿಬ್ಬಂದಿ-2/ಸಿಆರ್-56/2010-2011 ದಿನಾಂಕ13-11-2014
7. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ:153:ವಿಸೇಬಿ:2011. ದಿ:22-01-2015.

-------

**ಪ್ರಸ್ತಾವನೆ:**

ಶ್ರೀ ವಿಜಯಕುಮಾರ್ ಸೂರ್ಯವಂಶಿ ರವರು ಭಾಲ್ಕಿ ತಾಲ್ಲೂಕು ಬ್ಯಾಲಹಳ್ಳಿ ಗ್ರಾಮ ಪಂಚಾಯತಿಗೆ ಪಂಚಾಯತಿ ಅಭಿವೃದ್ಧಿ ಅಧಿಕಾರಿಯಾಗಿ ನೇಮಕಹೊಂದಿದ್ದು, ಜ್ಯಾಂತಿ ಗ್ರಾಮ ಪಂಚಾಯತಿಯಲ್ಲಿ ಹೆಚ್ಚುವರಿ ಪ್ರಭಾರದಲ್ಲಿ ಕರ್ತವ್ಯ ನಿರ್ವಹಿಸಿ ಅವರು ದಿ:4-8-2011 ರಿಂದ 23-9-2011ರ ವರೆಗೆ ವೈದ್ಯಕೀಯ ಕಾರಣಗಳಿಂದ ರಜೆಯ ಮೇಲೆ ತೆರಳಿ ದಿ:24-9-2011 ರಂದು ಜ್ಯಾಂತಿ ಗ್ರಾ.ಪಂ. ಯಲ್ಲಿ ಹಾಜರಾತಿ ವರದಿ ಸಲ್ಲಿಸಿ ಕರ್ತವ್ಯ ನಿರ್ವಹಿಸಿರುತ್ತಾರೆ. ಜೊತೆಗೆ ಸದರಿಯವರು ಆತ್ಮಹತ್ಯೆ ಮಾಡಿಕೊಂಡ ಸಮಯದಲ್ಲಿ ಅವರ ಹತ್ತಿರ ಸುಸೈಡ್ ನೋಟ್ ಇರುವ ಬಗ್ಗೆ ತಿಳಿದು ಬಂದಿದ್ದು, ಅದರಲ್ಲಿ ಶ್ರೀ ಶಿವಶೆಟ್ಟಿ, ಸೀತ ಗ್ರಾ.ಪಂ. ಕಾರ್ಯದರ್ಶಿ, ಬ್ಯಾಲಹಳ್ಳಿ ಇವರು ಚುನಾಯಿತ ಪ್ರತಿನಿಧಿಗಳ ಮತ್ತು ಸ್ಥಳೀಯ ಜನರೊಂದಿಗೆ ಶ್ಯಾಮೀಲಾಗಿ ತೊಂದರೆ ಕೊಟ್ಟಿರುವುದಾಗಿ ಮುಕಾನಿಅ. ಜಿಪಂ. ಬೀದರ್ ರವರು ದಿ:10-11-2011ರ ಪತ್ರದಲ್ಲಿ ವರದಿ ಸಲ್ಲಿಸಿರುತ್ತಾರೆ. ಶ್ರೀ ವಿಜಯಕುಮಾರ್ ಸೂರ್ಯವಂಶಿ ರವರು ವೈದ್ಯಕೀಯ ರಜೆಯ ಮೇಲೆ ತೆರಳಿ ಹಿಂದಿರುಗಿದ ಸಂದರ್ಭದಲ್ಲಿ ಅವರ ಮೂಲ ಗ್ರಾಮ ಪಂಚಾಯತಿಯಾದ ಬ್ಯಾಲಹಳ್ಳಿ ಗ್ರಾಮ ಪಂಚಾಯತಿಯಲ್ಲಿ ಹಾಜರಾತಿ ಸಲ್ಲಿಸದೇ ಹೆಚ್ಚುವರಿ ಪ್ರಭಾರದಲ್ಲಿನ ಜ್ಯಾಂತಿ ಗ್ರಾಮ ಪಂಚಾಯತಿಯಲ್ಲಿ ಹಾಜರಾತಿ ಸಲ್ಲಿಸಿರುವುದನ್ನು ಗಮನಿಸಿದಲ್ಲಿ ಅವರ ಮೂಲ ಗ್ರಾಮ ಪಂಚಾಯತಿಯಲ್ಲಿ ತೀವ್ರತರ ಸಮಸ್ಯೆಯನ್ನು ಎದುರಿಸುತ್ತಿದ್ದ ವಿಷಯವು ಮೇಲ್ನೋಟಕ್ಕೆ ಕಂಡು ಬರುತ್ತದೆ. ಹೀಗಿದ್ದಾಗ್ಯೂ ಶ್ರೀ ಶಿವರಾಮ ಕೆ. ಚವ್ಹಾಣ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತಿ, ರವರು ಸರ್ಕಾರವು ದಿ:19-10-2011 ರಂದು ಹೊರಡಿಸಿರುವ ಸುತ್ತೋಲೆಯನ್ವಯ ಕ್ರಮವಹಿಸದೇ ಬೇಜವಾಬ್ದಾರಿತನ ಪ್ರದರ್ಶಿಸಿದ ಕಾರಣವಾಗಿ ಶ್ರೀ ವಿಜಯಕುಮಾರ್ ಸೂರ್ಯವಂಶಿ ರವರು ಅತೀವ ಖಿನ್ನತೆಗೆ ಒಳಗಾಗಿ ಆತ್ಮಹತ್ಯೆ ಮಾಡಿಕೊಳ್ಳುವ ಪರಿಸ್ಥಿತಿ ಒದಗಿ ಬಂದಿರುವುದಕ್ಕೆ ಕಾರಣವಾಗಿರುವ ಅಂಶವು ಸರ್ಕಾರಕ್ಕೆ ಗೋಚರವಾಗಿದೆ. ಆದ್ದರಿಂದ ಶ್ರೀ ಶಿವರಾಮ ಕೆ. ಚವ್ಹಾಣ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ತಾಪಂ. ಭಾಲ್ಕಿ ರವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಮತ್ತು ಮುಂದಿನ ಆದೇಶದವರೆಗೆ ದಿ:11-11-2011 ರ ಆದೇಶದಲ್ಲಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ರ ನಿಯಮ 10(1)(ಡಿ) ರಲ್ಲಿ ಪ್ರದತ್ತವಾದ ಅಧಿಕಾರದನ್ವಯ ಈ ಅಧಿಕಾರಿಯನ್ನು ಮೇಲೆ ಓದಲಾದ ಕ್ರಮಸಂಖ್ಯೆ(1)ರ ಆದೇಶದಲ್ಲಿ ಸೇವೆಯಿಂದ ಅಮಾನತ್ತುಪಡಿಸಲಾಗಿತ್ತು. ಈ ಆದೇಶದ ವಿರುದ್ಧ ಸದರಿ ಅಧಿಕಾರಿಯು ಮಾನ್ಯ ಕೆಎಟಿಯಲ್ಲಿ ಅರ್ಜಿ ಸಂಖ್ಯೆ: 7451/11 ನ್ನು ದಾಖಲಿಸಿದ್ದು, ಅದಕ್ಕೆ ದಿ:18-11-2011ರಂದು ಮಧ್ಯಂತರ ಆದೇಶ ನೀಡಿ ಅರ್ಜಿದಾರರ ಅಮಾನತ್ತಿನ ಆದೇಶವನ್ನು 3 ತಿಂಗಳವರೆಗೆ ತಡೆ ಹಿಡಿಯುವ ಮತ್ತು ಅವರನ್ನು ಅಮಾನತ್ತಿನ ಪೂರ್ವದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಹುದ್ದೆಗೆ ತೆಗೆದುಕೊಳ್ಳುವಂತೆ ಮೇಲೆ ಓದಲಾದ ಕ್ರಮಸಂಖ್ಯೆ(2)ರ ದಿನಾಂಕ:18-11-2011ರಲ್ಲಿ ಆದೇಶಿಸಿತು. ಆ ವೇಳೆಗಾಗಲೇ ಸದರಿ ಹುದ್ದೆಗೆ ಬೇರೊಬ್ಬ ಅಧಿಕಾರಿಯನ್ನು ನೇಮಿಸಲಾಗಿದ್ದರಿಂದ ಸದರಿ ಅಧಿಕಾರಿಯನ್ನು ಭಾಲ್ಕಿ ಕಾರ್ಯನಿರ್ವಾಹಕ

ಅಧಿಕಾರಿ ತಾಲ್ಲೂಕು ಪಂಚಾಯತಿ ಹುದ್ದೆಗೆ ಬದಲಾಗಿ ದಿ:09-12-2011 ರ ಆದೇಶದಲ್ಲಿ ಸಹಾಯಕ ಕಾರ್ಯದರ್ಶಿ ಜಿಲ್ಲಾ ಪಂಚಾಯತಿ, ಯಾದಗಿರಿ ಇಲ್ಲಿಗೆ ಮೇಲೆ ಓದಲಾದ ಕ್ರಮಸಂಖ್ಯೆ(3)ರಲ್ಲಿ ನೇಮಿಸಲಾಯಿತು. ಮೇಲೆ ಓದಲಾದ ಕ್ರಮಸಂಖ್ಯೆ(2)ರ ದಿನಾಂಕ:26-03-2013ರ ಅಂತಿಮ ಆದೇಶದಲ್ಲಿ ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ಸದರಿ ಅರ್ಜಿಯನ್ನು ಇತ್ಯರ್ಥಪಡಿಸಿ ಈ ಅಧಿಕಾರಿಯನ್ನು ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 153 ವಿಸೇಬಿ 2011 ದಿ:11-11-2011 ರ ಅಮಾನತ್ತಿನ ಆದೇಶವನ್ನು ರದ್ದುಪಡಿಸಿದೆ. ಮತ್ತು ಅರ್ಜಿದಾರರಿಗೆ ಅನ್ವಯವಾಗುವ ಎಲ್ಲಾ ಸೌಲಭ್ಯಗಳನ್ನು ಮಂಜೂರು ಮಾಡುವಂತೆ ಆದೇಶಿಸಿರುತ್ತದೆ.

ಮೇಲೆ ಓದಲಾದ ಕ್ರಮಸಂಖ್ಯೆ(4)ರಲ್ಲಿ ಶ್ರೀ ಶಿವರಾಮ ಕೆ. ಚವ್ಹಾಣ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತಿ, ಭಾಲ್ಕಿ ಇವರಿಗೆ ನಿಯಮ 214ರಡಿಯಲ್ಲಿ ಕಾರಣಕೇಳುವ ನೋಟಿಸಿನೊಂದಿಗೆ ದೋಷಾರೋಪಣಾ ಪಟ್ಟಿಯನ್ನು ಜಾರಿಮಾಡಲಾಗಿತ್ತು. ಸದರಿ ನೋಟಿಸಿಗೆ ಅಪಾದಿತ ಅಧಿಕಾರಿಯು ಮೇಲೆ ಓದಲಾದ ಕ್ರಮಸಂಖ್ಯೆ(5)ರಲ್ಲಿ ಸಲ್ಲಿಸಿರುವ ಲಿಖಿತ ಹೇಳಿಕೆಗಳ ಬಗ್ಗೆ ಮೇಲೆ ಓದಲಾದ ಕ್ರಮಸಂಖ್ಯೆ(6)ರಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್ ಬೀದರ್,ಇವರ ಅಭಿಪ್ರಾಯವನ್ನು ಪಡೆಯಲಾಗಿ, ಅವರು ಅಪಾದಿತ ಅಧಿಕಾರಿಯು ಈಗಾಗಲೇ ನಿವೃತ್ತಿ ಹೊಂದಿರುವುದರಿಂದ ಮತ್ತು ಈ ಪ್ರಕರಣದಲ್ಲಿ ಯಾವುದೇ ಹಣಕಾಸಿನ ದುರುಪಯೋಗ ವಾಗದಿರುವುದರಿಂದ ಸದರಿ ಅಧಿಕಾರಿಯವರು ಸಲ್ಲಿಸಿರುವ ರಕ್ಷಣಾ ಹೇಳಿಕೆಯನ್ನು ಒಪ್ಪಬಹುದಾಗಿದೆಯೆಂದು ಅಭಿಪ್ರಾಯ ನೀಡಿರುತ್ತಾರೆ.ಮೇಲೆ ಓದಲಾದ ಕ್ರಮ ಸಂಖ್ಯೆ(6)ರಲ್ಲಿ ಅಪಾದಿತ ಅಧಿಕಾರಿಯು ಸಲ್ಲಿಸಿರುವ ಲಿಖಿತ ಹೇಳಿಕೆಗಳು ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್ ಬೀದರ್, ಇವರ ಅಭಿಪ್ರಾಯವನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ ಸದರಿ ಅಧಿಕಾರಿಯ ವಿರುದ್ಧ ದಿನಾಂಕ:25-04-2014ರ ನೋಟೀಸಿನಲ್ಲಿ ಮಾಡಿರುವ ಅರೋಪಗಳಿಂದ ದೋಷಮುಕ್ತಗೊಳಿಸಿ ಆದೇಶಿಸಿದೆ. ಅದರಿಂದ ಸದರಿ ಅಧಿಕಾರಿಯು ಅಮಾನತ್ತಿನಲ್ಲಿ ಕಳೆದ ಅವಧಿಯನ್ನು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 153 ವಿಸೇಬಿ 2011 ಬೆಂಗಳೂರು ದಿನಾಂಕ:28-04-2015**

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ, ಶ್ರೀ ಶಿವರಾಮ್.ಕೆ.ಚವ್ಹಾಣ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತಿ ಬಾಲ್ಕಿ (ಪ್ರಸ್ತುತ ನಿವೃತ್ತಿ) ಇವರು ಅಮಾನತ್ತಿನಲ್ಲಿ ಕಳೆದ ದಿನಾಂಕ:11-11-2011 ರಿಂದ 09-12-2011ರ ವರೆಗಿನ ಅವಧಿಯನ್ನು ಕರ್ನಾಟಕ ನಾಗರೀಕ ಸೇವಾ ನಿಯಮಗಳು 100(3)ರನ್ವಯ ಕರ್ತವ್ಯದ ಅವಧಿಯೆಂದು ಪರಿಗಣಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ವಿ.ಹನುಮಂತಯ್ಯ),
ಸರ್ಕಾರದ ಅಧೀನ ಕಾರ್ಯದರ್ಶಿ,(ಸೇ.ಬಿ & ಸಿ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಗೆ:

1. ಮಹಾಲೇಖಪಾಲರು (ಎ ಮತ್ತು ಇ), ಕರ್ನಾಟಕ, ಬೆಂಗಳೂರು.
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬೀದರ್
3. ಸಂಬಂಧಿಸಿದ ಅಧಿಕಾರಿಗೆ.(ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಬೀದರ್ ರವರ ಮುಖಾಂತರ )
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ಸರ್ಕಾರದ ಕಾರ್ಯದರ್ಶಿ (ಪಂ.ರಾಜ್) /ಜಂಟಿ ಕಾರ್ಯದರ್ಶಿ (ಆಡಳಿತ), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಇವರ ಆಪ್ತ ಸಹಾಯಕರು.
5. ವಿಶೇಷಾಧಿಕಾರಿ, ಗಣಕ ಕೋಶ, ಗ್ರಾ.ಅ.ಪಂ.ರಾಜ್ ಇಲಾಖೆ.
6. ಮಾಹಿತಿ ಕೇಂದ್ರ / ಶಾಖಾ ರಕ್ಷಕ ಕಡತ / ಹೆಚ್ಚುವರಿ ಪ್ರತಿ.

GO